ಕಣದಲ್ಲಿದ್ದುದು ಸವ್ಯಸಾಚಿ. ಮೊದಲ ಪಂದ್ಯದಲ್ಲಿ ನಿರಾಯಾಸ ಗೆಲುವು ಸಾಧಿಸಿದ ಮೂವತ್ತೆರಡರ ಕಾರ್ಲ್‌ಸನ್, ಎರಡನೇ ಪಂದ್ಯವನ್ನು ಡ್ರಾ ಮಾಡಿಕೊಳ್ಳುವುದರೊಂದಿಗೆ ಹದಿನೆಂಟರ ಪ್ರಗ್ಗುವಿನ ಜೈತ್ರಯಾತ್ರೆಗೆ ನಿಲುಗಡೆಯಿಟ್ಟ. ಆ ಮೂಲಕ ವಿಶ್ವ ಚೆಸ್‌ನ ಎಲ್ಲ ಗರಿಗಳೂ ಕಾರ್ಲ್‌ಸನ್ ಕಿರೀಟಕ್ಕೆ ಸೇರಿ, ಅವನ ಶೋಕೇಸ್‌ನ ಖಾಲಿತನವೂ ನಿವಾರಣೆಯಾಯಿತು.

### ಗೆಲುವಿನ ಹೊಸ ಕುದುರೆ

ಫೈನಲ್ಸ್‌ನಲ್ಲಿ ವೀರೋಚಿತ ಸೋಲುಂಡರೂ, ಜನಮನ ಸೂರೆಗೊಳ್ಳುವಲ್ಲಿ ಪ್ರಗ್ಗು ಎರಡನೆಯವನಾಗಲಿಲ್ಲ. ವಿಶ್ವಕಪ್ ಟೂರ್ನಿಯಲ್ಲಿ ರನ್ನರ್–ಅಪ್ ಆಗುವ ಮೂಲಕ ಮುಂದಿನ ವರ್ಷದ 'ಕ್ಯಾಂಡಿಡೇಟ್ಸ್ ಟೂರ್ನಿ'ಗೆ ಪ್ರವೇಶ ಪಡೆದ. ವಿಶ್ವನಾಥನ್ ಆನಂದ್ ನಂತರ ಭಾರತೀಯರು ಪ್ರಜ್ಞಾನಂದನ ರೂಪದಲ್ಲಿ ಗೆಲುವಿನ ಕುದುರೆಯನ್ನು ಕಂಡರು. ವಿಶ್ವ ಚದುರಂಗಪ್ರಿಯರೆಲ್ಲ ಭಾರತೀಯ ಪ್ರತಿಭೆಯ ಆಟ–ಓಟಕ್ಕೆ ಭಲೇ ಎಂದರು; ಹದಿನೆಂಟರ ಭಾರತೀಯನಲ್ಲಿ ಭವಿಷ್ಯದ ಚಾಂಪಿಯನ್ ಕಂಡರು. ಗ್ಯಾರಿ ಕ್ಯಾಸ್ಪರೋವ್‌ನಂಥ ಚೆಸ್ ದಂತಕಥೆಯಿಂದ ಮೆಚ್ಚುಗೆ ದೊರೆಯಿತು. ಇದೆಲ್ಲಕ್ಕೂ ಮಿಗಿಲಾಗಿ, ಭಾರತದ ಪುಟಾಣಿಗಳಿಗೆ, ಹದಿಹರೆಯದ ಜಾಣಜಾಣೆಯರಿಗೆ ಹೊಸ ಐಕಾನ್ ದೊರೆತ ಅರ್ಥಪೂರ್ಣ ಸಂಭ್ರಮ.

ನಾರ್ವೆಯ ಹೆಮ್ಮೆ ಕಾರ್ಲ್‌ಸನ್ 2004ರ ಏಪ್ರಿಲ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದಾಗ ಪ್ರಜ್ಞಾನಂದ ಇನ್ನೂ ಹುಟ್ಟಿರಲಿಲ್ಲ. ಪ್ರಗ್ಗು ಎಂಬ ಕೃಷ್ಣಸುಂದರನ ಜನನವಾದದ್ದು ಕಾರ್ಲ್‌ಸನ್ ಗ್ರ್ಯಾಂಡ್‌ಮಾಸ್ಟರ್ ಕಿರೀಟ ಧರಿಸಿದ ಹದಿನಾರು



ಫಿಡೆ ವಿಶ್ವಕಪ್‌ನಲ್ಲಿ ಎರಡನೇ ಸ್ಥಾನ ಪಡೆದ ಪ್ರಗ್ಗು ಹಾಗೂ ಆತನ ತಾಯಿಯೊಂದಿಗೆ ಅಖಿಲ ಭಾರತ ಚೆಸ್ ಒಕ್ಕೂಟದ ಅಧ್ಯಕ್ಷ ಸಂಜಯ್ ಕಪೂರ್.



ತಮ್ಮನ ಸಾಧನೆಯ ಹಾದಿಯ ಅಂತರ್ಜಾಲ ಅಕ್ಕ ವೈಶಾಲಿ

## ಪಾಲಕರಿಗೊಂದು ಸುಂದರ ಪಾಠ

ಪ್ರಜ್ಞಾನಂದನ ಯಶಸ್ಸಿನ ಕಥನದಲ್ಲಿ ಇಂದಿನ ಪಾಲಕರಿಗೊಂದು ಪಾಠವಿದೆ. ಮಕ್ಕಳು ಟೀವಿ, ಮೊಬೈಲ್ ವ್ಯಸನಿಗಳೆನ್ನುವುದು ಈ ದಿನಗಳ ಮನೆ ಮನೆಯ ದೂರು. ಇಂಥ ದೂರು ರಮೇಶ್‌ಬಾಬು–ನಾಗಲಕ್ಷ್ಮಿ ಕುಟುಂಬದಲ್ಲೂ ಇತ್ತು. ಮಗಳು ವೈಶಾಲಿ ಸದಾ ಕಾಲ ಟೀವಿಯ ಮುಂದೆ ಕೂರುತ್ತಿದ್ದುದು ದಂಪತಿಯ ನಿದ್ದೆಗೆಡಿಸಿತ್ತು. ಮಗಳ ಮನಸ್ಸನ್ನು ಬೇರೆಡೆಗೆ ತಿರುಗಿಸಬೇಕೆಂದು ಯೋಚಿಸತೊಡಗಿದ ಅವರ ಕಣ್ಣೆದುರು, ಟೀವಿಗೆ ಪರ್ಯಾಯವಾಗಿ ಕಾಣಿಸಿದ್ದು ಚದುರಂಗದ ಮಣೆ. ಮಗಳನ್ನು ಚೆಸ್ ಅಕಾಡೆಮಿಗೆ ಸೇರಿಸಿದರು. ವೈಶಾಲಿ ಚದುರಂಗದ ಜಾಣೆಯೆನ್ನಿಸಿಕೊಂಡಳು. ಭಾರತೀಯ ಆಟಗಾರ್ತಿಯರ ತಂಡದಲ್ಲಿ ಆಕೆ ಸ್ಥಾನ ಪಡೆದುಕೊಂಡಿದ್ದಾಳೆ.

ಅಕ್ಕನನ್ನು ಮರುಳು ಮಾಡಿದ್ದು ತಮ್ಮನನ್ನು ಬಿಟ್ಟೀತೆ? ಆದರೆ, ಮಗನನ್ನೂ ಚೆಸ್ ಅಕಾಡೆಮಿಗೆ ಸೇರಿಸುವುದು ಮಧ್ಯಮವರ್ಗದ ಅಪ್ಪ–ಅಮ್ಮನಿಗೆ ಸುಲಭವಾಗಿರಲಿಲ್ಲ. ಚದುರಂಗದ ಕಾಯಿಗಳನ್ನು ನೋಡಿದಾಗಲೆಲ್ಲ ಅರಳುತ್ತಿದ್ದ ಮಗನ ಕಣ್ಣುಗಳನ್ನು ನೋಡಿದ ದಂಪತಿಗೆ ಪ್ರಗ್ಗುವನ್ನು ಅಕಾಡೆಮಿಗೆ ಸೇರಿಸದಿರಲು ಸಾಧ್ಯವಾಗಲಿಲ್ಲ. ಪರಿಣಾಮ: ಮನೆಯೊಂದು, ಇಬ್ಬರು ಗ್ರ್ಯಾಂಡ್ ಮಾಸ್ಟರ್‌ಗಳು!

ರಮೇಶ್‌ಬಾಬು–ನಾಗಲಕ್ಷ್ಮಿ ದಂಪತಿಗಳೇನೊ ತಮ್ಮ ಮಕ್ಕಳಿಗೆ ಟೀವಿಗೆ ಪರ್ಯಾಯವಾಗಿ ಚದುರಂಗವನ್ನು ಕಂಡುಕೊಂಡರು. ಅವರಂತೆ, ಎಲ್ಲ ಪೋಷಕರಿಗೂ ತಂತಮ್ಮ ಮಕ್ಕಳಿಗೆ ಏನಿಷ್ಟ ಎನ್ನುವುದನ್ನು ಕಂಡುಕೊಳ್ಳುವುದು ಸಾಧ್ಯವಾದರೆ, ಡಿಜಿಟಲ್ ವ್ಯಸನಕ್ಕೊಂದು ಮದ್ದು ಸಿಗುವುದು ಕಷ್ಟವಾಗದು.